# ಶಿವರಾಮ ಕಾರಂತರ ಚೋಮನದುಡಿ ಕಾದಂಬರಿಯಲ್ಲಿ ಶೋಷಣೆಯ ವಿವಿಧ ಮುಖಗಳು

ನರೇಂದ್ರ ಬಾಬು ಸಿ.ಆರ್.*

DOI: https://doi.org/10.5281/zenodo.19638172

**ABSTRACT**

ಜ್ಞಾನಪೀಠ ಪುರಸ್ಕೃತ ಡಾ. ಶಿವರಾಮ ಕಾರಂತರ 'ಚೋಮನದುಡಿ' ಕಾದಂಬರಿಯು ಸ್ವಾತಂತ್ರ್ಯಪೂರ್ವ ಭಾರತದ ಅಸ್ಪೃಶ್ಯತೆ, ಬಡತನ ಹಾಗೂ ಊಳಿಗಮಾನ್ಯ ವ್ಯವಸ್ಥೆಯ ಕ್ರೂರ ಮುಖಗಳನ್ನು ಅನಾವರಣಗೊಳಿಸುತ್ತದೆ. ಸ್ವಂತ ಭೂಮಿಯಲ್ಲಿ ಕೃಷಿ ಮಾಡಬೇಕೆಂಬ ಕನಿಷ್ಠ ಆಸೆಯೂ ಜಾತೀಯತೆಯ ಕಟ್ಟುಪಾಡುಗಳಿಂದ ಭಗ್ನಗೊಳ್ಳುವ ಬಗೆಯನ್ನು ಕಥಾನಾಯಕ ಚೋಮನ ಮೂಲಕ ಇಲ್ಲಿ ಚಿತ್ರಿಸಲಾಗಿದೆ. ಮೇಲ್ವರ್ಗದ ಶೋಷಣೆಗೆ ಸಿಲುಕಿ ಭೂಮಿಯ ಹಕ್ಕಿನಿಂದ ವಂಚಿತನಾಗುವ ಆತ, ತನ್ನ ಮಕ್ಕಳ ಸಾವು, ಸಾಲದ ಸುಳಿಗೆ ಸಿಲುಕಿ ಮಗಳಾದ ಬೆಳ್ಳಿಯ ಮೇಲಾಗುವ ಆರ್ಥಿಕ ಮತ್ತು ಲೈಂಗಿಕ ದೌರ್ಜನ್ಯ ಹಾಗೂ ಮತಾಂತರದ ಗೊಂದಲಗಳಿಂದ ಮಾನಸಿಕವಾಗಿ ಕುಗ್ಗಿಹೋಗುತ್ತಾನೆ. ಕಡೆಗೆ ದುಃಖ, ಅಸಹಾಯಕತೆ ಮತ್ತು ಆಕ್ರೋಶದ ಸಂಕೇತವಾದ 'ದುಡಿ'ಯನ್ನು ಬಾರಿಸುತ್ತಲೇ ಪ್ರಾಣ ಬಿಡುವ ಚೋಮನ ಯಾತನಾಮಯ ಬದುಕಿನ ಚಿತ್ರಣ ಹಾಗೂ ದಲಿತ ಸಂವೇದನೆಯ ವಿವಿಧ ಆಯಾಮಗಳನ್ನು ಇಲ್ಲಿ ಮಾರ್ಮಿಕವಾಗಿ ವಿಶ್ಲೇಷಿಸಲಾಗಿದೆ.

**KEYWORDS:** ಚೋಮನದುಡಿ, ಅಸ್ಪೃಶ್ಯತೆ, ಶೋಷಣೆ, ದಲಿತ ಸಂವೇದನೆ, ಊಳಿಗಮಾನ್ಯ ವ್ಯವಸ್ಥೆ.

* **ಡಾ. ನರೇಂದ್ರ ಬಾಬು ಸಿ.ಆರ್.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ, ಬೆಂಗಳೂರು.

ಡಾ. ಶಿವರಾಮ ಕಾರಂತರು ಕನ್ನಡ ಸಾಹಿತ್ಯ ಲೋಕ ಕಂಡ ಅತ್ಯಂತ ಮೇರು ಪ್ರತಿಭೆ. 'ಕಡಲತೀರ ಭಾರ್ಗವ', 'ನಡೆದಾಡುವ ವಿಶ್ವಕೋಶ' ವೆಂಬ ಪ್ರಶಂಸೆಗೆ ಭಾಜನರಾಗಿರುವ ಶಿವರಾಮ ಕಾರಂತರು ಕನ್ನಡದ ಕ್ರಾಂತಿಪುರುಷರಲ್ಲಿ ಒಬ್ಬರಾಗಿದ್ದು, ಅವರ ಪ್ರತಿಭೆಗೆ ಅಳವಡದ ಕಲೆಯಿಲ್ಲ. ಏಕೆಂದರೆ ಇವರು ಕೇವಲ ಸಾಹಿತಿಯಲ್ಲದೆ ರಂಗಕರ್ಮಿಯಾಗಿದ್ದು ಯಕ್ಷಗಾನ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರುವುದರ ಮೂಲಕ ಆ ಕಲೆಯ ಪುನರುಜ್ಜೀವನಕ್ಕಾಗಿ ಸಾಕಷ್ಟು ಶ್ರಮಿಸಿದರು. ತನ್ನ ಬಹುಮುಖ ಪ್ರತಿಭೆಯಿಂದ ಒಟ್ಟು 143 ಕೃತಿಗಳನ್ನು ರಚಿಸುವುದರ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಗೋಪಾಲಕೃಷ್ಣ ಅಡಿಗರು ಕಾರಂತರನ್ನು ಕುರಿತು "ಶಿವರಾಮಕಾರಂತರನ್ನು ಪರಿಚಯ ಮಾಡಿಕೊಡುವುದೂ ಒಂದೇ, ನೇಸರನ್ನು ಸೊಡರಿನಿಂದ ತೋರಿಸುವುದೂ ಒಂದೇ" ಎಂದಿದ್ದಾರೆ. ಈ ಮಾತು ಕಡಲತೀರ ಭಾರ್ಗವರ ಕಡಲಿನಂತಹ ವಿದ್ವತ್ತಿಗೆ ಸಾಕ್ಷಿ ಎನ್ನಬಹುದು.

ಕಾರಂತರು ಬರೆದ ಕಾದಂಬರಿಗಳಲ್ಲಿ 'ಚೋಮನದುಡಿ' ಕಾದಂಬರಿಯು ಕನ್ನಡ ಸಾಹಿತ್ಯಲೋಕ ಕಂಡ ಅತ್ಯಂತ ಪ್ರಭಾವಶಾಲಿ ಹಾಗೂ ಹೃದಯಸ್ಪರ್ಶಿ ಕಾದಂಬರಿ. ಈ ಕಾದಂಬರಿಯು ನಮ್ಮ ಸಮಾಜದಲ್ಲಿನ ಅಸ್ಪೃಶ್ಯತೆ ಮತ್ತು ಬಡತನದ ಕ್ರೂರ ಮುಖವನ್ನು ಅನಾವರಣಗೊಳಿಸುತ್ತದೆ. ದಲಿತ ವರ್ಗಕ್ಕೆ ಸೇರಿದ ಈ ಕಾದಂಬರಿಯ ಕಥಾನಾಯಕ 'ಚೋಮ' ಎಂಬ ಬಡ ರೈತನ ಆಸೆ, ಆಕಾಂಕ್ಷೆಗಳು ಈ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವು ಕಟ್ಟುಪಾಡುಗಳಿಂದ ಆತನು ಅನುಭವಿಸುವ ಯಾತನೆಯೇ ಈ ಕಾದಂಬರಿಯ ಜೀವಾಳವಾಗಿದೆ. ತನ್ನ ಸ್ವಂತ ಭೂಮಿಯಲ್ಲಿ ನೇಗಿಲನ್ನು ಉತ್ತು ಸ್ವತಂತ್ರ ಹಾಗೂ ಸ್ವಾವಲಂಬಿ ಬದುಕನ್ನು ನಡೆಸಬೇಕೆಂಬ ಕನಸು ಕೊನೆಗೆ ಕಮರಿ ಹೋದಾಗ ಆತನು ನಿಜವಾಗಿಯೂ ಕುಗ್ಗಿ ಹೋಗುತ್ತಾನೆ.

ಕಾದಂಬರಿಯು ದಲಿತ ಸಂವೇದನೆಯ ಹಿನ್ನೆಲೆಯಲ್ಲಿ ರಚಿತವಾಗಿದ್ದು, ಕಥಾನಾಯಕನಾದ ಚೋಮನು ಅಸ್ಪೃಶ್ಯನಾಗಿರುವ ಕಾರಣದಿಂದ ನಿರಂತರವಾಗಿ ಮೇಲ್ವರ್ಗದವರಿಂದ ಶೋಷಿಸಲ್ಪಡುತ್ತಾನೆ. ಭೋಗನಹಳ್ಳಿ ಎಂಬ ಪುಟ್ಟ ಗ್ರಾಮದ ಒಂದು ಸಣ್ಣ ಗುಡಿಸಲಿನಲ್ಲಿ ಚನಿಯ, ಗುರುವ, ಬೆಳ್ಳಿ, ನೀಲ, ಕಾಳ ಎಂಬ ತನ್ನ ಐದು ಮಕ್ಕಳೊಂದಿಗೆ ವಾಸಿಸುವ ಚೋಮನ ಕುಟುಂಬಕ್ಕೆ ಬಡತನ ಮತ್ತು ಅಸ್ಪೃಶ್ಯತೆಗಳು ದೊಡ್ಡ ಸವಾಲುಗಳಾಗಿವೆ. ಚೋಮನಿಗಿದ್ದ ಎರಡು ದಿನನಿತ್ಯದ ಅಭ್ಯಾಸಗಳೆಂದರೆ ಒಂದು ಹೆಂಡವನ್ನು ಕುಡಿಯುವುದು, ಇನ್ನೊಂದು 'ದುಡಿ'ಯನ್ನು ಬಾರಿಸುವುದು. ಬೆಳಿಗ್ಗೆಯಿಂದ ಸಂಜೆಯವರೆಗೆ ಒಡೆಯ ಸಂಕಪ್ಪಯ್ಯ ಹೊಲದಲ್ಲಿ ಮೈಮುರಿದು ದುಡಿದು ತಂದ ಎರಡು ಪಾವು ಅಕ್ಕಿಯನ್ನು ಸಂಜೆ ಬಿರುಮನ ಹೆಂಡದಂಗಡಿಗೆ ಹಾಕಿ ಕುಡಿಯುವುದು. ನೀಲ ಮತ್ತು ಕಾಳ ಇನ್ನು ಚಿಕ್ಕ ಮಕ್ಕಳಾದ್ದರಿಂದ ಪಾಪ ಬೆಳ್ಳಿ, ಗುರುವ, ಚನಿಯರು ಬೆಳಿಗ್ಗೆಯಿಂದ ಸಂಜೆಯವರೆಗೆ ಕಷ್ಟಪಟ್ಟು ದುಡಿದು ಬಂದ ಅಕ್ಕಿಯಲ್ಲೇ ಬೆಳ್ಳಿ ಎಲ್ಲರಿಗೂ ದಿನದ ಎರಡು ಹೊತ್ತು ಗಂಜಿ ಹಾಕಬೇಕಿತ್ತು. ಇನ್ನುಳಿದಂತೆ ಇದು ಚೋಮನ ಕುಟುಂಬದ ಬದುಕಾಗಿತ್ತು.

ಜೀವನಶ್ರದ್ಧೆ ಮತ್ತು ಅದರ ಶೋಧನೆ ಕಾರಂತರ ಕಾದಂಬರಿಗಳ ಕೇಂದ್ರವಸ್ತುವಾಗಿದೆ. ಆ ಶ್ರದ್ಧೆ ಮತ್ತು ಅದರ ಶೋಧನೆಯ ಪ್ರಕ್ರಿಯೆಯಲ್ಲಿ ಪಡೆಯುವ ಅನುಭವ ಮತ್ತು ಸೋಸಿಕೊಳ್ಳುವ ಅರಿವು ಕಾರಂತರ ಕಾದಂಬರಿಯ ಜೀವದ್ರವ್ಯಗಳಾಗಿವೆ. ಕಾರಂತರಿಗೆ ಇಹದ ಬದುಕು ಮುಖ್ಯವಾಗುತ್ತದೆ. ಬದುಕಿನೊಂದಿಗೆ ವ್ಯಕ್ತಿ ಏರ್ಪಡಿಸಿಕೊಳ್ಳುವ ಸಂಬಂಧದ ಸ್ವರೂಪವನ್ನು ಶೋಧಿಸುವುದು ಹಾಗೂ ಆ ಶೋಧನೆಯ ಪ್ರಕ್ರಿಯೆಯಲ್ಲಿ ಬದುಕಿಗೆ ಎದುರಾಗುವ ಸಮಸ್ಯೆ ಸನ್ನಿವೇಶಗಳಿಗೆ ಅವು ಉಂಟು ಮಾಡುವ ಸಿಹಿ–ಕಹಿ ಅನುಭವಗಳಿಗೆ ವ್ಯಕ್ತಿಗಳು ತೋರಿಸುವ ಪ್ರತಿಕ್ರಿಯೆ ಮುಖ್ಯವೆನಿಸುತ್ತದೆ. ಈ ಕಾದಂಬರಿಯ ನಾಯಕನಾದ ಚೋಮನು ಇದಕ್ಕೆ ಸಾಕ್ಷಿಯಾಗುತ್ತಾನೆ. ಈತನು ತನ್ನ ದುಡಿಯನ್ನು ಬಾರಿಸುವುದರೊಂದಿಗೆ ಕಾದಂಬರಿ ಪ್ರಾರಂಭವಾಗಿ ಕೊನೆಗೆ ಆತನ 'ದುಡಿ'ಯ ಶಬ್ದದೊಂದಿಗೆ ಮುಕ್ತಾಯವಾಗುತ್ತದೆ. ಇದು ಚೋಮನ ಅಸಹಾಯಕತೆ, ನೋವು ಮತ್ತು ನಿರಾಸೆಯ ಸಾಂಕೇತಿಕ ಅಭಿವ್ಯಕ್ತಿಯಾಗಿದೆ.

ದಲಿತವರ್ಗಕ್ಕೆ ಸೇರಿದ ಚೋಮನಿಗೆ ಜೀವಮಾನದಲ್ಲಿ ತಾನು ಒಂದಿಷ್ಟು ಭೂಮಿಯನ್ನು ಪಡೆದು ಸ್ವಂತ ಕೃಷಿಕನಾಗಬೇಕೆಂಬ ಅತೀವ ಆಸೆಯಿತ್ತು. ಇದಕ್ಕೆ ಪೂರಕವಾಗಿ ಈ ಆಸೆಯನ್ನು ಪೂರೈಸಿಕೊಳ್ಳಲು ಆತನಿಗೆ ಕಾಡಿನಲ್ಲಿ ಸಿಕ್ಕ ಎರಡು ಎತ್ತಿನ ಕರುಗಳನ್ನು ತಂದು ಪ್ರೀತಿಯಿಂದ ಸಾಕಿ ದೊಡ್ಡವನ್ನಾಗಿ ಮಾಡಿರುತ್ತಾನೆ. ತನ್ನಲ್ಲಿರುವ ಹೆಬ್ಬಯಕೆಯನ್ನು ಒಡೆಯನಾದ ಸಂಕಪ್ಪಯ್ಯನ ಹತ್ತಿರ ತೋಡಿಕೊಂಡರೂ ಅದಕ್ಕೆ ಆಸ್ಪದ ನೀಡದ ಒಡೆಯ ಆತ ಕೇಳಿದಾಗಲೆಲ್ಲಾ ಒಂದೊಂದು ಜವಾಬು ನೀಡುತ್ತಿರುತ್ತಾನೆ. ಧಣಿಗಳಾದ ಸಂಕಪ್ಪಯ್ಯನಿಗೆ ಯಾರಾರೋ ಭೂಮಿಯನ್ನು ಗೇಣಿಗೆ ತೆಗೆದುಕೊಳ್ಳುತ್ತಿರುವಾಗ ಈತನಿಗ್ಯಾಕೆ ಕೊಡಬಾರದೆಂದು ಮನಸ್ಸಿನ ಎಲ್ಲೋ ಒಂದೆಡೆ ಚೋಮನಿಗೆ ಭೂಮಿಯನ್ನು ಗೇಣಿಗೆ ನೀಡಲು ಒಪ್ಪಿಗೆಯಿದ್ದರೂ ಸಂಪ್ರದಾಯಸ್ಥ ಕುಟುಂಬದ ಪ್ರತಿನಿಧಿಯಾದ ಸಂಕಪ್ಪಯ್ಯನ ತಾಯಿ ಕೊಡಿಸಬೇಕಲ್ಲ? ಹೊಲೆಯರಿಗೆಲ್ಲಾ ಭೂಮಿಯಂತೆ, ಗೇಣಿಯಂತೆ, ನಮ್ಮ ಪೂರ್ವಿಕರ ಕಾಲದಿಂದ ಇಲ್ಲಿಯವರೆಗೂ ಎಂದೂ ಹೊಲೆಯರಿಗೆ ಭೂಮಿಯನ್ನು ಗೇಣಿಗೆ ಕೊಟ್ಟಿಲ್ಲ ಹಾಗಾಗಿ ಯಾರೂ ಮಾಡದ ಕೆಲಸವನ್ನು ನೀನು ಮಾಡಬೇಡ, ಒಂದು ವೇಳೆ ಮಾಡಿದರೆ ನೀನು ಅಪಕೀರ್ತಿಗೆ ಒಳಗಾಗುತ್ತೀಯ ಎಂದಳು. ಆ ಅಪಕೀರ್ತಿಗೆ ಹೆದರಿ ಸಂಕಪ್ಪಯ್ಯನು ಚೋಮನಿಗೆ ಭೂಮಿಯನ್ನು ಕೊಡಲು ನಿರಾಕರಿಸುತ್ತಾನೆ. ಆದರೆ ಪ್ರತಿದಿನವೂ ಚೋಮನಿಂದ, ಅವನ ಮಕ್ಕಳಿಂದ ಜೀತದಂತೆ ಮಾತ್ರ ದುಡಿಸಿಕೊಳ್ಳುತ್ತಲೇ ಇರುತ್ತಾನೆ. ಹಾಗಾದರೆ ಬಡವರು ಸ್ವಂತ ಭೂಮಿಯನ್ನು ಹೊಂದಬೇಕು ಎಂದು ಆಸೆ ಪಡುವುದು ತಪ್ಪೇ? ಕನಸು ಕಾಣುವುದು ತಪ್ಪೇ? ಎಂಬ ಪ್ರಶ್ನೆಗೆ ತಪ್ಪಿಲ್ಲ ಎಂಬ ಉತ್ತರ ಓದುಗರಲ್ಲಿ ಸಹಜವಾಗಿ ಮೂಡಿದರೂ ನಮ್ಮ ಸಮಾಜ ಬಡವರು ಮತ್ತು ಅಸ್ಪೃಶ್ಯರ ಕನಸುಗಳು ನನಸಾಗಲು ಬಿಡಬೇಕಲ್ಲ?

ಪ್ರಾಚೀನ ಕಾಲದಿಂದಲೂ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿರುವ ತೀರ್ಮಾನಗಳು ಒಟ್ಟಂದವಾಗಿ ಬೆರೆತು ಚೋಮನ ಬಹುದಿನಗಳ ಕನಸನ್ನು

ಭಗ್ನಗೊಳಿಸುತ್ತವೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯ ಮನಸ್ಥಿತಿಗಿಂತ ವ್ಯವಸ್ಥೆಯ ಪರಿಸ್ಥಿತಿ ಕುಬ್ಜವೆಂಬಂತೆ ಕಂಡುಬರುತ್ತದೆ. ಜಡ ಸಂಪ್ರದಾಯದ ಕಟ್ಟು, ಕಟ್ಟಳೆಗಳಿಂದ ನಿರ್ಮಾಣಗೊಳ್ಳುತ್ತಿರುವ ಅವೈಜ್ಞಾನಿಕ ನಿಲುವುಗಳು ಸಮಾಜದಲ್ಲಿ ಎಂತಹ ಅನರ್ಥಗಳಿಗೆ ದಾರಿ ಮಾಡಿಕೊಟ್ಟು ಮುಗ್ಧ, ಅಮಾಯಕ ಜೀವಗಳನ್ನು ಬಲಿ ಪಡೆಯುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಸಂಪ್ರದಾಯವಾದಿಗಳೆಂದು ಹೇಳಿಕೊಳ್ಳುವವರು ತಾರತಮ್ಯವನ್ನು ಬಿತ್ತುವ, ಜಾತಿವ್ಯವಸ್ಥೆಯನ್ನು ತಮ್ಮ ಸಂಸ್ಕೃತಿಯ ಮೂಲ ಸ್ವರೂಪವೆಂದು ತಿಳಿದು ಆ ಸೀಮಾವನ್ನು ದಾಟದೆ ಅದನ್ನೇ ಮುಂದುವರೆಸುವುದರಲ್ಲಿ ಆಸಕ್ತರಾಗಿದ್ದಾರೆ. ಆದ್ದರಿಂದ ಕೊನೆಗೂ ಜಾತಿಯ ಕಾರಣದಿಂದ ತನ್ನ ಆಸೆಯನ್ನು ಈಡೇರಿಸಿಕೊಳ್ಳದೆ ಶೋಷಣೆಗೆ ಒಳಗಾಗಿ ಸಾವನ್ನಪ್ಪುವ ದುರಂತವನ್ನು ಈ ಕಾದಂಬರಿಯಲ್ಲಿ ಕಾರಂತರು ಮನಗಾಣಿಸಿದ್ದಾರೆ.

ಚೋಮನು ತನ್ನ ಹಿರಿಯ ಮಗನಾದ ಚನಿಯನ ಸಾವಿನಿಂದ ವಿಚಲಿತನಾಗದೆ ಮನಸ್ಸನ್ನು ಗಟ್ಟಿಗೊಳಿಸಿಕೊಳ್ಳುತ್ತಾನೆ. ಏಕೆಂದರೆ ಯಾವುದೇ ಒಬ್ಬ ಮನುಷ್ಯನಿಗೆ ಒಂದು ಪೆಟ್ಟು ಬಿದ್ದರೆ ತಡೆದುಕೊಳ್ಳುತ್ತಾನೆ ಆದರೆ ಚೋಮನಿಗೆ ನಿತ್ಯವೂ ಒಂದಲ್ಲಾ ಒಂದು ಆಪತ್ತು ಎದುರಾದಾಗ ಸಹಜವಾಗಿ ಮನಸ್ಸನ್ನು ಕಲ್ಲನ್ನಾಗಿಸಿಕೊಳ್ಳುತ್ತಾನೆ. 'ದಿನಾ ಸಾಯುವವರಿಗೆ ಅಳುವವರು ಯಾರು?' ಎಂಬ ಗಾದೆಯಂತೆ ಒಂದಲ್ಲಾ ಒಂದು ಚಿಂತೆ ತಪ್ಪದ ಮನೆಯಲ್ಲಿ ಕೊನೆಗೆ ಸಾವು ಕೂಡ ಒಂದು ವಿಶೇಷವಾದ ಘಟನೆಯೆನಿಸುವುದಿಲ್ಲ. ಆದರೆ ಬೆಳ್ಳಿಗೆ ತನ್ನ ಅಣ್ಣನಾದ ಚನಿಯನ ಸಾವನ್ನು ಅರಗಿಸಿಕೊಳ್ಳಲಾಗುವುದಿಲ್ಲ ಅದಕ್ಕೆ ಚೋಮನು ಬೆಳ್ಳಿಗೆ "ನಿನಗೆ ಭ್ರಮೆ, ಅದಕ್ಕೆಲ್ಲ ಅತ್ತರೆ ಫಲವಿದೆಯೇ? ಅವರಿಬ್ಬರು ಹೋದರೇನು ನೀನಿಲ್ಲವೇ? ನಮ್ಮ ನೀಲ, ಕಾಳರಿಲ್ಲವೇ! ಹೆಚ್ಚೆಂದರೆ ಎಲ್ಲರೂ ಹೋಗಬಹುದು; ನಾನೂ ಹೋಗುತ್ತೇನೆ. ಕೊನೆಯ ತನಕ ಉಳಿಯುವವರಾರು?" ಎಂದು ಫಿಲಾಸಫಿ ಹೇಳುತ್ತಾನೆ. ಈ ಸಂದರ್ಭದಲ್ಲಿ ಚೋಮನಿಗೆ ದುಃಖವನ್ನು ಮರೆಯಲು ಅವನ ಪ್ರೀತಿಯ ದುಡಿಯಿದೆ ಹಾಗೂ ಅವನ ಒಡಲಿಗೂ, ದುಡಿಗೂ ನಡುವೆ ಸೇಂದಿಯ ಸೇತುವೆಯನ್ನು ಕಟ್ಟಿದರೆ ಇಂತಹ ಸಾವಿರಾರು ಸಾವನ್ನು ಮರೆಯಬಹುದು.

ಚೋಮನು ಒಮ್ಮೆ ಪುಟ್ಟ ಮಗನಾದ ನೀಲನನ್ನು ನೀರಿನಲ್ಲಿ ಮೀಯಿಸಲು ಹೋದಾಗ ಆಕಸ್ಮಿಕವಾಗಿ ಆ ನದಿಯಲ್ಲಿ ನೀಲನು ಮುಳುಗುವ ಸಮಯದಲ್ಲಿ ಅವನನ್ನು ಕಾಪಾಡಲು ಬಂದ ಬ್ರಾಹ್ಮಣ ಹುಡುಗನನ್ನು ಹೊಲೆಯರನ್ನು ಮುಟ್ಟುತ್ತೀಯೆ? ಎಂದು ತಡೆದು ನಿಲ್ಲಿಸಿದ, ಜೀವಕ್ಕಿಂತ ಜಾತಿಗೆ ಬೆಲೆ ಕೊಡುವ ಈ ಸಮಾಜ ಚೋಮನಿಗೆ ಬೇಸಾಯ ಮಾಡಲು ಬಿಡುವುದೇ? ಚೋಮನಂತಹ ಅಸ್ಪೃಶ್ಯನು ಸ್ವತಃ ಭೂಮಿಯನ್ನು ಹೊಂದಲು ಸಹಕರಿಸುವುದೇ? ಹೌದು, ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆಯು ಗಟ್ಟಿಯಾಗಿ ಬೇರೂರಿದ್ದು, ದಿನದಿಂದ ದಿನಕ್ಕೆ ಒಂದು ರೀತಿಯ ಪಿಡುಗಾಗಿ ಪರಿಣಮಿಸಿದೆ. ಜಾತಿಪ್ರಜ್ಞೆಯೆಂಬ ಪೆಡಂಭೂತ ಎಲ್ಲರನ್ನೂ ಹಿಡಿದುಕೊಂಡಿರುವ ಪರಿಣಾಮವಾಗಿ ಮೇಲು-ಕೀಳೆಂಬ ತಾರತಮ್ಯತೆ ತಾಂಡವಾಡುತ್ತಿದೆ.

ರಾಷ್ಟ್ರಕವಿ ಕುವೆಂಪುರವರು ಸಮಾಜಕ್ಕೆ 'ವಿಶ್ವಮಾನವ' ಸಂದೇಶವನ್ನು ಕೊಟ್ಟರೂ ಎಲ್ಲರೂ ಅಲ್ಪಮಾನವರಾಗಿಯೇ ಉಳಿದಿದ್ದಾರೆ. ಕುವೆಂಪು 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು' ಎಂಬ ತಮ್ಮ ಕವಿತೆಯಲ್ಲಿ "ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ ದಡದಲ್ಲಿ ಮೀಯುತ್ತ ನಿಂತಿರುವ ನಾನು ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು ಸುಮ್ಮನಿದ್ದರೆ ಶಾಸ್ತ್ರ ಸಮ್ಮತವೇನು?" ಎಂದು ಅಮಾನವೀಯತೆಯ ವಿರುದ್ಧ ಧ್ವನಿಯನ್ನು ಎತ್ತಿದ್ದಾರೆ. ಇಲ್ಲಿ ಮನುಷ್ಯನಿಗೆ ಬಾಹ್ಯ ಶಾಸ್ತ್ರಗಳಿಗಿಂತ ಎದೆಯ ಧ್ವನಿ ಮತ್ತು ಮಾನವೀಯತೆಯೇ ಮುಖ್ಯವೆಂಬುದು ವೇದ್ಯವಾಗುತ್ತದೆ. ನೀರಡಿಸಿ ಬಂದವನಿಗೆ ನೀರು ಕೊಡಲು, ನೊಂದವನ ಕಣ್ಣೀರನ್ನು ಒರೆಸಲು ಶಾಸ್ತ್ರಗಳ ಅವಶ್ಯಕತೆ ಬೇಕಿಲ್ಲ ಬದಲಿಗೆ ಮನುಷ್ಯನ ಅಂತಃಕರಣ ಮತ್ತು ಸಹಾನುಭೂತಿಯೇ ಮುಖ್ಯವಾಗುತ್ತದೆ. ನೀಲನು ನೀರಿನಲ್ಲಿ ಮುಳುಗುತ್ತಿರುವಾಗ ಯಾವುದೇ ಜಾತಿಯನ್ನು ನೋಡದೆ ಮನುಷ್ಯತ್ವದಿಂದ, ಮಾನವೀಯತೆಯಿಂದ ಆತನನ್ನು ರಕ್ಷಿಸಬೇಕಿತ್ತೇ ವಿನಃ ಜಾತಿಯ ನೆಪವೊಡ್ಡಿ ಹುಡುಗನ ಸಾವಿಗೆ ಕಾರಣವಾಗಬಾರದಿತ್ತು. ಇದು ಸಹ ಜಾತಿಯ ಶೋಷಣೆಯಿಂದಾದ ಸಾವು ಅಂತಲೇ ಹೇಳಬಹುದು.

ಕಾರಂತರು ದೈಹಿಕ ಬಯಕೆಯ ಸೆಳೆತ ಎಷ್ಟು ಬಲವಾದದ್ದು ಎಂಬುದನ್ನು ಬಲ್ಲವರು ಮಾತ್ರವಲ್ಲ, ತಮ್ಮ ಕಾದಂಬರಿಗಳಲ್ಲಿ ಅದನ್ನು ಗಂಭೀರವಾದ ಶೋಧನೆಗೆ ಒಳಪಡಿಸಿರುವ ಮಹತ್ವದ ಬರಹಗಾರರಾಗಿದ್ದಾರೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈ ಕಾದಂಬರಿಯಲ್ಲಿ ಚೋಮನ ಹಿರಿಯ ಮಕ್ಕಳಾದ ಚನಿಯಾ ಮತ್ತು ಗುರುವರು ತನ್ನ ತಂದೆಯು ಕಾಫಿ ತೋಟದಲ್ಲಿ ಕೆಲಸವನ್ನು ಮಾಡುತ್ತಿದ್ದಾಗ ಮಿಂಗೇಲ ದೊರೆಗಳ ಹತ್ತಿರ ಮಾಡಿದ್ದ ಐದಾರು ರೂಪಾಯಿ ಸಾಲ ಬೆಳೆದು ಇಪ್ಪತ್ತು ರೂಪಾಯಿಗಳಾಗಿತ್ತು. ಆ ಸಾಲವನ್ನು ತೀರಿಸಲು ಘಟ್ಟಕ್ಕೆ ಹೋದ ಚನಿಯಾ ಮತ್ತು ಗುರುವ ಇಬ್ಬರೂ ಕುಡಿತವನ್ನು ಕಲಿತದ್ದಲ್ಲದೆ ಗುರುವನು 'ಮೇರಿ' ಎಂಬ ಹುಡುಗಿಯ ಮೋಹದ ಬಲೆಗೆ ಬಿದ್ದು, ಪ್ರೀತಿಸಿ ಆಕೆಯನ್ನು ಮದುವೆಯಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರೆ, ಹಿರಿಯವನಾದ ಚನಿಯನೊಬ್ಬ ಸಾಲ ತೀರಿಸಲಾಗದೆ ಬೇಸರದಿಂದ ಬರಿಗೈಯಲ್ಲಿ ಮನೆಗೆ ವಾಪಸಾಗುತ್ತಾನೆ. ನಂತರ ಒಂದೆರಡು ವಾರಗಳಲ್ಲಿ ಜ್ವರಪೀಡಿತನಾಗಿ ಚನಿಯನು ಸಾವನ್ನಪ್ಪುತ್ತಾನೆ. ಆದರೆ ಮಿಂಗೇಲ ದೊರೆಗಳಿಗೆ ಕೊಡುವ ಸಾಲ ಹಾಗೆ ಉಳಿಯುತ್ತದೆ. ಈ ಸಂದರ್ಭದಲ್ಲಿ ಬೆಳ್ಳಿಗೆ ಅಣ್ಣನಾದ ಚನಿಯನ ಸಾವು ಒಂದೆಡೆ ದುಃಖವನ್ನು ತಂದರೆ, ಮತ್ತೊಬ್ಬ ಅಣ್ಣ ಗುರುವ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡದ್ದಕ್ಕೆ ಬೇಸರವಾಗುತ್ತದೆ.

ಹೀಗಿರುವಾಗ ಒಂದು ದಿವಸ ಮನ್ವೇಲನು ಬಂದು ಚೋಮ ನಿನ್ನ ಮಕ್ಕಳು ಸಾಲವನ್ನು ತೀರಿಸಲು ಬಂದು ಕುಡಿತಕ್ಕೆ ಬಿದ್ದು ಸಾಲ ತೀರಿಸಲಾಗದೆ ನಿನ್ನ ಸಾಲ ಇಪ್ಪತ್ತೈದು ರೂಪಾಯಿಯಾಗಿದೆ ಎಂದು ಸುಳ್ಳು ಲೆಕ್ಕವನ್ನು ಹೇಳಿದ್ದಲ್ಲದೆ ಈ ಸಾಲವನ್ನು ತೀರಿಸಲು ನೀವು ಮೂರು ಜನರಾದರೂ ಬರಲೇಬೇಕು ಎಂದಾಗ ಚೋಮನಿಗೆ ಆತಂಕವಾಗುತ್ತದೆ. ಅಲ್ಲದೆ ಆ ಸಂದರ್ಭದಲ್ಲಿ ಆರೋಗ್ಯ ಸರಿಯಿಲ್ಲದ

ಕಾರಣ ಘಟ್ಟಕ್ಕೆ ಹೋಗಿ ಸಾಲ ತೀರಿಸುವ ಸಾಮರ್ಥ್ಯವಿರುವುದಿಲ್ಲ. ಆಗ ಮನ್ವೇಲ ಬೆಳ್ಳಿಗೆ ನೀನೆ ಏಕೆ ಬಂದು ಸಾಲವನ್ನು ತೀರಿಸಬಾರದು ಎಂದಾಗ ಬೆಳ್ಳಿಯನ್ನು ಸಾಲವನ್ನು ತೀರಿಸಲು ಘಟ್ಟಕ್ಕೆ ಕಳಿಸಲು ಚೋಮನಿಗೆ ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ಬೆಳ್ಳಿ ಮತ್ತು ನೀಲರು ಮನ್ವೇಲನ ಹಿಂದೆ ಹೊರಡುತ್ತಾರೆ. ದುರಂತವೆಂದರೆ ನೀಲನು ಅಲ್ಲಿಗೆ ಹೋದ ಮೇಲೆ ಅನಾರೋಗ್ಯಕ್ಕೆ ತುತ್ತಾದ ಕಾರಣ ಅವಳಿಗೆ ಬರುತ್ತಿದ್ದ ಹಣವನ್ನು ಅವನ ಔಷಧಿಯನ್ನು ಖರೀದಿಸಲು ಸಾಲುತ್ತಿತ್ತೇ ಹೊರತು ಸಾಲವನ್ನು ತೀರಿಸಲಾಗಲಿಲ್ಲ. ಹಾಗಾಗಿ ಮನ್ವೇಲನ ಒತ್ತಡದ ಮೇರೆಗೆ ಅವನ ಮನೆಯಲ್ಲಿ ಕೆಲಸ ಮಾಡಲು ಒಪ್ಪಿಕೊಂಡಳು. ಮನ್ವೇಲನ ಮನೆಗೆ ಅವಳು ಕೆಲಸಕ್ಕೆ ಹೋದ ಮೇಲೆ ಅಲ್ಲಿ ನಡೆದದ್ದೇ ಬೇರೆ.

ಕಾಮ ಪಿಶಾಚಿಯಂತಿದ್ದ ಮನ್ವೇಲ, ಆತನಲ್ಲಿದ್ದ ಕಾಮ ಪ್ರೇರಣೆ ಹಾಗೂ ಕಾಯದ ದೌರ್ಬಲ್ಯ ಅವಳನ್ನು ಆತನ ಕಾಮದ ದಾಸಿಯನ್ನಾಗಿ ಮಾಡಿತು. ನಂತರ ಈಕೆಯ ಮೇಲೆ ದೊರೆಗಳಿಗೂ ಆಸೆಯಾಗಿ ಬೆಳ್ಳಿಯನ್ನು ತಮ್ಮ ಕಾಮದಾಹವನ್ನು ಪೂರೈಸಿಕೊಳ್ಳಲು ಬಳಸಿಕೊಳ್ಳುತ್ತಾರೆ. ಈಕೆಗೂ ಸಹ ನನ್ನ ತಂದೆ ದೊರೆಗಳ ಹತ್ತಿರ ಮಾಡಿದ ಸಾಲ ತೀರಬೇಕು ಎಂಬುದು ಒಂದೆಡೆಯಾದರೆ, ಮತ್ತೊಂದೆಡೆ ಯೌವನದ ಹೊಸ್ತಿಲಲ್ಲಿದ್ದ ಬೆಳ್ಳಿಗೆ ವಯೋಸಹಜವಾದ ಲೈಂಗಿಕ ಆಸೆಗಳು ಇದ್ದುದರಿಂದ ಮೊದಲ ಬಾರಿಗೆ ಯೌವನದ ಸುಖವನ್ನು ಅನುಭವಿಸತೊಡಗಿದಳು. ಹಾಗಾಗಿ ಮನ್ವೇಲ ಹಾಗೂ ಮಿಂಗೇಲ ದೊರೆಗಳ ಕಾಮದಾಟಕ್ಕೆ ಸಹಕರಿಸಿದಳೇ ಹೊರತು ಪ್ರತಿರೋಧಿಸಲಿಲ್ಲ ಈ ರೀತಿಯಲ್ಲಿ ತಂದೆಯ ಸಾಲವನ್ನು ತೀರಿಸುತ್ತಾಳೆ. ಇತ್ತ ಬೆಳ್ಳಿ ಮನೆಗೆ ಬಂದ ಮೇಲೆ ಚೋಮನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ನನ್ನ ಗಂಡು ಮಕ್ಕಳು ಮಾಡಲಾರದ ಕೆಲಸವನ್ನು ತನ್ನ ಮಗಳು ಮಾಡಿದ್ದಾಳೆಂದು ಅವನಿಗೆ ಹೆಮ್ಮೆ ಹಾಗೂ ಸಂಭ್ರಮ. ಆದರೆ ಪಾಪ ಚೋಮನಿಗೆ ತನ್ನ ಮಗಳು ಸಾಲವನ್ನು ತೀರಿಸಿದ ಬಗೆ ಹೀಗೆ ಎಂದು ತಿಳಿಯದು. ಒಂದು ವೇಳೆ ತಿಳಿದಿದ್ದರೆ ಸಂಭ್ರಮದ ಸ್ಥಾನದಲ್ಲಿ ಕೋಪ, ಆಕ್ರೋಶ ಹಾಗೂ ತಿರಸ್ಕಾರವಿರುತ್ತಿತ್ತು.

ಚೋಮನು ಅಂತಿಮವಾಗಿ ನಾನು ಹೀಗೆ ಇದ್ದರೆ ಕೊನೆಯವರೆಗೂ ಧಣಿಯರಿಂದ ಭೂಮಿಯನ್ನು ಪಡೆದು ಸ್ವಂತ ಕೃಷಿಕನಾಗಲು ಸಾಧ್ಯವಿಲ್ಲವೆಂದು ಭಾವಿಸಿ ತನ್ನ ಮಗ ಗುರುವನಂತೆ ತಾನು ಕ್ರೈಸ್ತಮತಕ್ಕೆ ಮತಾಂತರಗೊಳ್ಳಲು ಮನಸ್ಸು ಮಾಡುತ್ತಾನೆ. ಏಕೆಂದರೆ ಒಮ್ಮೆ ಪಾದ್ರಿಯ ಹತ್ತಿರ ಭೂಮಿಯನ್ನು ಗೇಣಿಗೆ ಕೇಳಲು ಹೋದಾಗ ಅವರು ನಮ್ಮ ಧರ್ಮಕ್ಕೆ ಸೇರಿಕೊಂಡರೆ ಮಾತ್ರ ಭೂಮಿಯನ್ನು ಕೊಡುತ್ತೇವೆ ಎಂದಾಗ ಕೋಪದಿಂದ ಕಾಲು ಕಿತ್ತಿದ್ದನು. ಆದರೆ ಮಗನಾದ ಗುರುವ ಮೇರಿಯನ್ನು ಮದುವೆಯಾಗಿ ಆ ಧರ್ಮಕ್ಕೆ ಸೇರಿಕೊಂಡು ಬೇಸಾಯಗಾರನಾಗಿದ್ದಾನೆ ಎಂದು ತಿಳಿದಾಗ ಮೊದಲು ಕೋಪಗೊಂಡರೂ ಸದ್ಯದ ಪರಿಸ್ಥಿತಿಯಲ್ಲಿ ಈ ದಾರಿಯೇ ಉತ್ತಮವೆಂದು ಭಾವಿಸುತ್ತಾನೆ.

“ಇನ್ನು ಬೇಡ, ಈ ಊರಿನ ದೇವರ ತಂಟೆಯೇ ಬೇಡ! ತನಗಿನ್ನು ಕ್ರಿಸ್ತ

ದೇವರು! ಮಗ ಗುರುವನನ್ನು ಬೇಸಾಯಗಾರನನ್ನಾಗಿ ಮಾಡಿದ ದೇವರು" ಎಂಬುದಾಗಿ ನಿರ್ಧರಿಸಿ ಮಗಳ ಹತ್ತಿರ ಪ್ರಸ್ತಾಪಿಸಿದಾಗ ಆಕೆ ಸಂಪೂರ್ಣವಾಗಿ ಒಪ್ಪಿಗೆ ಸೂಚಿಸುತ್ತಾಳೆ. (ಏಕೆಂದರೆ ನಾವು ಕ್ರೈಸ್ತ ಮತಕ್ಕೆ ಹೋದರೆ ಅಪ್ಪ ಭೂಮಿಯನ್ನು ಪಡೆದು ಬೇಸಾಯಗಾರನಾಗಬಹುದು ಎಂಬುದು ಒಂದು ಯೋಚನೆಯಾದರೆ, ನಾನು ಮನ್ವೇಲನ ಹೆಂಡತಿಯಾಗಬಹುದು ಎಂಬುದು ಮತ್ತೊಂದು ಯೋಚನೆ. ಅದಕ್ಕಾಗಿಯೇ ತನ್ನ ಮನಸ್ಸಿನಲ್ಲಿ ಅಣ್ಣ ಗುರುವನು ಮೇರಿಯ ಪತಿಯಾದಂತೆ ತಾನು ಮನ್ವೇಲನ ಮಡದಿಯಾಗುವೆನೆಂದು ಚಿತ್ರಿಸಿಕೊಂಡಳು) ಹಾಗೂ "ಅಪ್ಪ ಗುರುವಣ್ಣನನ್ನು ಕರೆದುಕೊಂಡು ಬರಬಾರದೇಕೆ! ಅವನು ಚೆನ್ನಾಗಿದ್ದರೆ ಅವನ ಜೊತೆಯಲ್ಲೇ ನಾವೂ ಇದ್ದು ಬಿಡುವ, ನಿನ್ನ ಆಸೆಯೂ ಕೂಡಿ ಬಂದ ಹಾಗೆ ಆಗುತ್ತದೆ" ಎಂದಳು. ಆಗ ಚೋಮ ಮಗಳ ಯೋಚನೆ ಯುಕ್ತವಾದುದೆಂದು ತಿಳಿದು ಮಗನನ್ನು ಕರೆದುಕೊಂಡು ಬರಲು ಹೊರಡುತ್ತಾನೆ.

ಚೋಮನು ಬೀಸು ಹೆಜ್ಜೆಗಳನ್ನಿಡುತ್ತಾ ಹೋಗುತ್ತಿರಬೇಕಾದರೆ ಅವನು ನಂಬಿರುವ ಪಂಜುರ್ಲಿ ಭೂತದ ಗುಡಿ ಸಿಗುತ್ತದೆ. ಅಲ್ಲಿ ಅವನು ಮಾಮೂಲಿನಂತೆ ತನ್ನ ಮೊಣಕಾಲುಗಳನ್ನು ಊರಿ ನಮಸ್ಕಾರ ಹಾಕಿಕೊಳ್ಳಲು ಹೋದಾಗ ಪಂಜುರ್ಲಿ ಭೂತ ತನ್ನ ಎದುರಿಗೆ ನಿಂತಂತೆ ಕಂಡು "ಚೋಮ, ಮೀಸೆ ಹಣ್ಣಾಗುವ ತನಕ ನನ್ನನ್ನು ನಂಬಿ ಬಂದು ಈಗ ಸಾಯುವ ಮೂರು ದಿನಕ್ಕೆ ಮುಂಚೆ ನನ್ನನ್ನು ಬಿಟ್ಟು ಪಾದ್ರಿಯ ಹಿಂದೆ ಓಡುತ್ತೀಯೋ?" ಎಂದು ಕೇಳಿದಂತೆ ಅನಿಸಿ ಅವನ ಎದೆ ಝಲ್ಲೆಂದು, ತಲೆಮಾರುಗಳಿಂದ ನಂಬಿ ಬಂದಿರುವ ದೇವರನ್ನು ಮರೆತು ತಾನಿಂಥ ಉದ್ಧಟ ಕೆಲಸವನ್ನು ಮಾಡುವುದು ಸರಿಯಲ್ಲವೆನಿಸಿತು. ಪಾದ್ರಿ ಮತದವರು ಸಾಯುವುದಿಲ್ಲವೇ? ಕಷ್ಟ, ಸುಖ ಒಂದಲ್ಲ ಒಂದು ರೀತಿಯಿಂದ ಕ್ರಿಸ್ತೀಯರಿಗೂ ತಪ್ಪಿದುಂಟೆ? ಎಂದು ತನ್ನ ಮನಸ್ಸಿನಲ್ಲಿಯೇ ಬಗೆದು ನಾನು ನಂಬಿದ ಭೂತವನ್ನು ಮರೆತರೆ ಸಾಯುವ ತನಕ ಅದರ ಉಪದ್ರ ತಪ್ಪಲಾರದು ಎಂಬ ಭಯವುಂಟಾಗಿ 'ಏನೇ ಇರಲಿ ಇದ್ದಂತೆ ಇದ್ದು, ಬಂದದ್ದನ್ನು ಅನುಭವಿಸುತ್ತೇನೆ' ಎಂದು ನೆನೆದು ಮನೆಗೆ ವಾಪಸಾಗುತ್ತಾನೆ. ಇಲ್ಲಿ ಚೋಮನು ತನ್ನ ಜಾತಿಯ ಮಿತಿಗಳನ್ನು ಮೀರಿ ಕ್ರೈಸ್ತ ಮತಕ್ಕೆ ಸೇರಲು ನಿರ್ಧರಿಸಿದರೂ ಆತನ ಒಳಮನಸ್ಸು ಅದಕ್ಕೆ ಒಪ್ಪದೆ ಹಾಗೂ ಪಂಜುರ್ಲಿ ಮಾತಿಗೆ ಹೆದರಿ ಹಿಂತಿರುಗುತ್ತಾನೆ. ಆದರೆ ಮನೆಯಲ್ಲಿ ಮನ್ವೇಲನು ಮತ್ತು ಮಗಳಾದ ಬೆಳ್ಳಿ ಒಂದೇ ಚಾಪೆಯ ಮೇಲಿದ್ದ ಆತಂಕಕಾರಿ ಸನ್ನಿವೇಶವನ್ನು ಕಂಡು ಅವನ ಎದೆ ಒಂದು ಕ್ಷಣ ಕಂಪಿಸುತ್ತದೆ. ಪ್ರೀತಿಯ ಮಗಳ ಮೇಲೆ ಆಕ್ರೋಶ ಹೆಚ್ಚುತ್ತದೆ ಏಕೆಂದರೆ ಮಗಳಿಗೆ ಮದುವೆ ಮಾಡಬೇಕೆಂದುಕೊಂಡಿದ್ದ ಚೋಮನಿಗೆ ಈ ಸನ್ನಿವೇಶ ಆಕಾಶವೇ ಕಳಚಿ ಮೇಲೆ ಬಿದ್ದಂತಾಗುತ್ತದೆ.

ಈಗ ಚೋಮನಿಗೆ ತನ್ನ ಮಗಳು ಸಾಲವನ್ನು ತೀರಿಸಿದ ಬಗೆ ಹೇಗೆ ಎಂದು ಎಲ್ಲಾ ಅರ್ಥವಾಗುತ್ತದೆ ಕೋಪದಿಂದ ಕೈಯಲ್ಲಿದ್ದ ದೊಣ್ಣೆಯನ್ನು ಮನ್ವೇಲನ ಕಡೆ ಎಸೆಯುತ್ತಾನೆ ಅವನು ಪ್ರಾಣ ಭಯದಿಂದ ಓಡಿ ಹೋಗುತ್ತಾನೆ. ನಂತರ ಚೋಮನು ಹುಚ್ಚನಂತಾಗುತ್ತಾನೆ. ತನಗೆ ಬಂದ ಅತಿಯಾದ ಕೋಪದಿಂದ ಬೆಳ್ಳಿಯ ಕತ್ತನ್ನು

ಹಿಡಿದು ಹೊರಗೆ ದೂಡುತ್ತಾನೆ. ಇಲ್ಲಿ ಚೋಮನಿಗೆ ತಾನು ನಂಬಿದ್ದ ಬೆಳ್ಳಿ ನನಗೆ ಮೋಸ ಮಾಡಿದಳು ಎಂಬ ಕಾರಣಕ್ಕೆ ನನಗೆ ಮಕ್ಕಳೇ ಇಲ್ಲ. ಇನ್ನು ಏನಾದರೇನು! ನನ್ನ ದಿನ ಇನ್ನು ಕಳೆಯಿತು. ಗುರುವ ಹಾಗಾಗಲಿ, ಬೆಳ್ಳಿ ಹೀಗಾಗಲಿ! ಕಾಳ ಇನ್ನು ಹೆಚ್ಚಿನವನಾಗಲಿ! ಎಂದು ಒಮ್ಮೆ ವಿಕಟ ನಗುವನ್ನು ಬೀರುತ್ತಾನೆ.

ಚೋಮನಿಗೆ ವಯಸ್ಸು ಮೀರುತ್ತಾ ಬಂದುದರಿಂದ ಸಂಸಾರ ಭಾರವಾಗಬಹುದು ಎಂಬುದರಿಂದಲೋ ಏನೋ ಸಾವು–ಸೋಲುಗಳು ಸೇರಿ ಅವನ ಭಾರವನ್ನು ತಗ್ಗಿಸುತ್ತಿವೆ. ಮನಸ್ಸಿನ ಭಾರ ಮಾತ್ರ ಹೆಚ್ಚುತ್ತಿದೆ. "ಈ ವರ್ಷ ನೀಲ, ಕಳೆದ ವರ್ಷ ಚನಿಯ, ಮುಂದಿನ ವರ್ಷ ಯಾರ ಸರದಿಯೋ? ದೈವ ನನ್ನನ್ನು ಒಯ್ದಿದ್ದರೆ ಯಾವ ತೊಂದರೆಯೂ ಇಲ್ಲ" ಎಂದು ತನ್ನಷ್ಟಕ್ಕೆ ಚೋಮ ಅಂದುಕೊಳ್ಳುತ್ತಾನೆ. ಕೊನೆಗೆ ಅತೀವ ಬೇಸರದಿಂದ ತನ್ನ ದುಡಿಯನ್ನು ಕೈಗೆ ತೆಗೆದುಕೊಂಡು 'ಢಮ ಢಮ್ಮ ಢಕ ಢಕ್ಕ' ಎಂದು ಬಾರಿಸುತ್ತಲೇ ತನ್ನ ಪ್ರಾಣವನ್ನು ಬಿಡುತ್ತಾನೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ಕಾದಂಬರಿಯಲ್ಲಿ ಸ್ವಾತಂತ್ರ್ಯಪೂರ್ವ ಭಾರತದ ದಲಿತವರ್ಗದ ಬವಣೆ, ಜಾತಿವ್ಯವಸ್ಥೆ, ಊಳಿಗಮಾನ್ಯ ಪದ್ಧತಿಯ ಕ್ರೌರ್ಯ, ಕೊನೆಯವರೆಗೂ ಸ್ವಂತ ಭೂಮಿಯಿಲ್ಲದೆ ಜೀತದಾಳಾಗಿ ಹಸಿವು ಮತ್ತು ಸಾಮಾಜಿಕ ಅಸಮಾನತೆಯಿಂದ ಕಂಗಾಲಾದ ಚೋಮನ ಯಾತನಾಮಯ ಬದುಕು, ಬಡತನ, ಬಯಕೆ ಮತ್ತು ಬದುಕಿನ ಅನಿವಾರ್ಯತೆಗಳನ್ನು ಕಾರಂತರು ವಾಸ್ತವವೆಂಬಂತೆ ಚಿತ್ರಿಸಿದ್ದಾರೆ. ಹಾಗೂ ಚೋಮನ ದುಡಿ ಮತ್ತು ಹೆಂಡದ ಮೋಹ ಅವನ ಬದುಕಿನ ಭಾಗವಾಗಿದ್ದರೂ ಅವನೊಳಗಿನ ಸ್ವಾತಂತ್ರ್ಯದ ಹಂಬಲ ಮತ್ತು ಬೇಸಾಯದ ಕನಸುಗಳು ಕೊನೆಗೆ ಕನಸುಗಳಾಗಿಯೇ ಉಳಿಯುವ ದುರಂತವನ್ನು ಸ್ಪಷ್ಟೀಕರಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಶಿವರಾಮ ಕಾರಂತ ಕೆ., (2024), ಚೋಮನದುಡಿ, ಬೆಂಗಳೂರು: ಸ್ವಪ್ನ ಬುಕ್ ಹೌಸ್.
2. ರಾಘವೇಂದ್ರರಾವ್ ಎಚ್.ಎಸ್., (2001), ಶತಮಾನದ ಸಾಹಿತ್ಯ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ಮಾಲಿನಿ ಬಿ. ಮಲ್ಯ (ಸಂಪಾದಕರು), (1992), ಶಿವರಾಮ ಕಾರಂತ ವಾಙ್ಮಯ ವೃತ್ತಾಂತ, ಬೆಂಗಳೂರು: ಎಸ್. ಬಿ. ಎಸ್. ಪ್ರಕಾಶನ.
4. ಅಶೋಕ ಟಿ.ಪಿ., (2010), ಶಿವರಾಮ ಕಾರಂತ ಎರಡು ಅಧ್ಯಯನಗಳು, ಹೆಗ್ಗೋಡು: ಅಕ್ಷರ ಪ್ರಕಾಶನ.
5. ಕುವೆಂಪು, (2012), ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ, ಮೈಸೂರು: ಉದಯರವಿ ಪ್ರಕಾಶನ.